## ಪ್ರಾರ್ಥನೆ

### ಭಾಗವತದಿಂದ

**ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್**
**ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯತ್ಸೂರಯಃ।**
**ತೇಜೋವಾರಿಮೃದಾಂ ಯಥಾ ವಿನಿಮಯೋ**
**ಯತ್ರ ತ್ರಿಸರ್ಗೋಽಮೃಷಾ**
**ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥**

ಪರಮಸತ್ಯಸ್ವರೂಪನಾದ ಪರಮಾತ್ಮನನ್ನು ಧ್ಯಾನಮಾಡೋಣ. ಈ ವಿಶ್ವದ ಸೃಷ್ಟಿ ಸ್ಥಿತಿ ಪ್ರಲಯಗಳಿಗೆ ಅವನೇ ಕಾರಣನು. ಅವನ ಇರುವಿಕೆಯಿಂದಲೇ ಈ ಜಗತ್ತಿನ ಎಲ್ಲಾ ಕ್ರಿಯೆಗಳೂ ನಡೆಯುವುದು. ಇಲ್ಲದಿದ್ದರೆ, ಇದರ ನಿರ್ವಹಣೆ ಹೇಗೆ ತಾನೇ ಸಾಧ್ಯವಾಗುತ್ತಿತ್ತು? ಸರ್ವಪ್ರಕಾರಗಳಿಂದಲೂ ಅವನೇ ಎಲ್ಲದಕ್ಕೂ ಕಾರಣನು. ಆತನು ಎಲ್ಲವನ್ನೂ ಬಲ್ಲವನಾಗಿದ್ದಾನೆ; ತನಗೆ ತಾನೇ ಪ್ರಭುವಾಗಿ ಸ್ವಯಂ ಪ್ರಕಾಶನಾಗಿ ಬೆಳಗುತ್ತಿದ್ದಾನೆ. ಆದಿಕವಿಯಾದ ಚತುರ್ಮುಖ ಬ್ರಹ್ಮ ದೇವರಿಗೂ ಕೂಡ ಅತ್ಯಂತ ಪ್ರೀತಿಯಿಂದ ಮಾನಸಿಕವಾಗಿಯೇ ವೇದವನ್ನು ವಿಸ್ತಾರವಾಗಿ ಇವನು ಉಪದೇಶ ಮಾಡಿದನು. ಯಾವನನ್ನು ಅರಿಯಲಾರದೇ ಮಹಾಜ್ಞಾನಿಗಳೂ ಕೂಡ ತೊಳಲಾಡುತ್ತಿರುವರೋ, ಅಂತಹ ಸರ್ವೋತ್ತಮನೂ ಸರ್ವಾತೀತನೂ ಆದ ಸ್ವಾಮಿಯೇ ಅವನು. ತೇಜಸ್ಸು, ಜಲ ಮತ್ತು ಪೃಥ್ವಿಗಳ ವಿಶಿಷ್ಟವಾದ ಸೇರುವಿಕೆಯಿಂದ ಆಗಿರುವ ಮೂರು ಬಗೆಯ ಸೃಷ್ಟಿಗೆ ಆಧಾರವಾಗಿದ್ದರೂ, ಅದರ ವಿಕಾರಕ್ಕೆ ಒಳಗಾಗದ ನಿಷ್ಕಲ ನಿರಂಜನಸ್ವರೂಪಿ ಅವನು. ಇಂತಹ ಪರಮ ಸತ್ಯಸ್ವರೂಪನನ್ನು ಧ್ಯಾನಮಾಡೋಣ.

### ಕುಂತಿಯ ಪ್ರಾರ್ಥನೆ

**ನಮಸ್ಯೇ ಪುರುಷಂ ತ್ವಾದ್ಯಮೀಶ್ವರಂ ಪ್ರಕೃತೇಃ ಪರಮ್ ।**
**ಅಲಕ್ಷ್ಯಂ ಸರ್ವಭೂತಾನಾಮ್ ಅಂತರ್ಬಹಿರವಸ್ಥಿತಮ್ ॥**

ಪ್ರಕೃತಿಯನ್ನು ಮೀರಿನಿಂತಿರುವವನೂ, ಆದ್ಯ ಪರಮೇಶ್ವರನೂ ಎಲ್ಲ ಭೂತಗಳನ್ನೂ ಒಳಗೂ ಹೊರಗೂ ಪೂರ್ಣವಾಗಿ ವ್ಯಾಪಿಸಿದ್ದರೂ ಇಂದ್ರಿಯಗಳಿಗೆ ಗೋಚರಿಸದೇ ಇರುವವನೂ ಆದ ಪರಮ ಪುರುಷನಾದ ನಿನಗೆ ನಮೋ ನಮಃ.

**ಮಾಯಾಜವನಿಕಾಚ್ಛನ್ನಮಜ್ಞಾಧೋಕ್ಷಜಮವ್ಯಯಮ್ ।**
**ನ ಲಕ್ಷ್ಯಸೇ ಮೂಢದೃಶಾ ನಟೋ ನಾಟ್ಯಧರೋ ಯಥಾ ॥**

ಮಾಯೆಯೆಂಬ ತೆರೆಯ ಮಧ್ಯೆ ಮರೆಸಿಕೊಂಡಿರುವವನೂ ಇಂದ್ರಿಯಗಳನ್ನು ಮೆಟ್ಟಿ ನಿಂತಿರುವ ನಿರ್ವಿಕಾರನೂ ಆದ ನೀನು ವೇಷವನ್ನು ಧರಿಸಿರುವ ಚತುರ ನಟನಂತೆ ಅಭಿನಯಿಸುತ್ತಿರುವೆ. ಇಂತಹ ನಿನ್ನನ್ನು ಮೂಢದೃಷ್ಟಿಯುಳ್ಳವರು ಹೇಗೆ ತಾನೇ ಗುರುತಿಸಬಲ್ಲರು?

## ಸೂಕ್ತಿಪ್ರಭ

### ಅನುಭವ

ಅನುಭವವಿಲ್ಲದ ಜ್ಞಾನ ಬರಿಯ ಬಾಯಿಮಾತಷ್ಟೆ. *–ಜೆ.ಪಿ.ಸನ್*

ಜೀವನದ ಕಟು ವಾಸ್ತವ ಸತ್ಯವೆಂದರೆ, ಅನುಭವವನ್ನು ವರ್ಗಾಯಿಸಲಾಗದು ಎಂಬುದು. ಬೇರೊಬ್ಬನ ಸಂಕಟಗಳಿಂದ ಯಾವನೂ ಕಲಿಯಲಾರನು, ಅದಕ್ಕಾಗಿ ಅವನೇ ಕಷ್ಟಪಡಬೇಕು. *–ವೈಲ್ಯಾಂಡ್*

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿದ್ದಂತೆ. *–ಸುಭಾಷಿತ*

ಅನುಭವವೆಂಬುದು ಕಠೋರ ಶಿಕ್ಷಕ. ಅವನ ವಿದ್ಯಾಲಯದಲ್ಲಿ ಪದವೀಧರರಾದವರಿಲ್ಲ, ಬಿರುದು ಹೊಂದಿದವರಲ್ಲ. ಬದುಕಿ ಬಂದವರಷ್ಟೇ ಕೆಲವರಿರುವರು. *–ಟಾಲ್‌ಸ್ಟಾಯ್*

ಅಲ್ಪಜ್ಞಾನವು ಮಾನವನನ್ನು ಅವಸರದ ನಿರ್ಣಯಕ್ಕೆ ಬರುವಂತೆ ಮಾಡುತ್ತದೆ. ಅನುಭವ ಮತ್ತು ವಿನಯವಂತಿಕೆಗಳು, ನೀತಿ ಹಾಗೂ ಭೀತಿಯನ್ನು ಹುಟ್ಟಿಸುತ್ತವೆ. *–ಜೆ. ರೇಮಿ ಟೇಲರ್*

ಒಂದು ಮುಳ್ಳಿನಷ್ಟು ಅನುಭವವು ಇಡೀ ಕಾಡಿನಷ್ಟು ಎಚ್ಚರಿಕೆಯ ಮಾತುಗಳಿಗಿಂತ ಬೆಲೆಯುಳ್ಳದ್ದು. *–ಲೋವೆಲ್*

ಅನುಭವವು ಅತ್ಯಂತ ಶ್ರೇಷ್ಠ ಶಾಲಾ ಶಿಕ್ಷಕನಾಗಬಲ್ಲದು. ಆದರೆ, ಶಾಲಾ ಶುಲ್ಕ ಮಾತ್ರ ತುಂಬ ದುಬಾರಿ. *–ಕಾರ್ಲೈಲ್*

ಯಾವ ಮನುಷ್ಯನ ಜ್ಞಾನವೂ ಅವನ ಅನುಭವಕ್ಕಿಂತ ಮಿಗಿಲಾಗಿರಲು ಸಾಧ್ಯವಿಲ್ಲ. *–ಜಾನ್ ಲಾಕ್*

ಪ್ರತಿಯೊಬ್ಬನೂ ತನ್ನ ಹಿಂದಿನ ತಪ್ಪುಗಳಿಗೆ ಅನುಭವವೆಂಬ ದೊಡ್ಡ ಹೆಸರನ್ನು ಕೊಡುತ್ತಾನೆ. *–ಆಸ್ಕರ್ ವೈಲ್ಡ್*

ಅನುಭವ ಬಂದ ಹಾಗೆಲ್ಲ ಜಗತ್ತು ಅರ್ಥವಾಗುತ್ತ ಹೋಗುತ್ತದೆ. *–ಕನ್‌ಫ್ಯೂಷಿಯಸ್*

ಅನುಭವಶೂನ್ಯವಾದ ಜ್ಞಾನವು ನೀರಿಲ್ಲದ ಕೊಡವಿದ್ದಂತೆ. *–ಚೀನಿ ಗಾದೆ*

ಪ್ರಪಂಚದ ಅನುಭವವಿಲ್ಲದೆ ಯಾರೂ ಪರಿಪೂರ್ಣ ವ್ಯಕ್ತಿಯಾಗಲು ಸಾಧ್ಯವಿಲ್ಲ. ಅನುಭವವು ಪರಿಶ್ರಮದಿಂದ ಗಳಿಸಿಕೊಳ್ಳುವ ಸಂಗತಿಯಾಗಿದೆ. ಧಾವಿಸುವ ಕಾಲಗತಿಯಿಂದ ಸಂಸ್ಕರಿಸಲ್ಪಟ್ಟದ್ದಾಗಿದೆ. *–ಶೇಕ್ಸ್‌ಪಿಯರ್*

ಬದುಕಿನಲ್ಲಿ ಕಲಿಯುವುದು, ಕಲಿತಿದ್ದನ್ನು ಮರೆಯುವುದು – ಈ ಎರಡೂ ಕ್ರಿಯೆಗಳು ಒಂದಾದ ಮೇಲೊಂದು ನಡೆಯುತ್ತಿರುತ್ತವೆ. ಆದರೆ, ಹೊಸದನ್ನು ಕಲಿಯುವುದಕ್ಕಿಂತಲೂ ಕಲಿತಿದ್ದನ್ನು ಮರೆಯುವುದು ಕೆಲವೊಮ್ಮೆ ಬುದ್ಧಿವಂತಿಕೆಯೆನಿಸುತ್ತದೆ. *–ಬೈರನ್*

ಅನುಭವವೆಂದರೆ ಭವಿಷ್ಯದ ನಿರ್ಮಾಪಕ ಹಾಗೂ ಭೂತಕಾಲದ ಕ್ರಿಯೆಗಳ ಫಲದಾತ. *–ಅರಿಸ್ಟಾಟಲ್*